<u>ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಶೃಂಗೇರಿ.</u>

<u>ಸಿ.ಸಿ. ನಂಬರ್ಃ **117/2019**</u>

ಪಿರ್ಯಾದಿಃ ಶ್ರೀ.ವೈ.ಜಿ. ಲಕ್ಷ್ಮಿನರಸಿಂಹ
ಬಿನ್ ಲೇಟ್ ವೈ ಎಂ ಗುರುಮೂರ್ತಿ,
ವಯಸ್ಸುಃ 59, ವಾಸಃ ಹರಿಹರ ಬೀದಿ,
ಶೃಂಗೇರಿ ಪಟ್ಟಣ, ಶೃಂಗೇರಿ ತಾಲ್ಲೂಕು,
ಚಿಕ್ಕಮಗಳೂರು ಜಿಲ್ಲೆ.

ವಿರುದ್ಧ

ಆರೋಪಿಃ ಶ್ರೀಮತಿ. ರೂಪಶ್ರೀ ಶೃಂಗೇರಿ ನಾಗಭೂಷಣ್,
ಕೋಂ ಕೃಷ್ಣಗಿರಿ ಟುಪಿಲ್ ಅಮರ್ ನಾಥ್,
ವಯಸ್ಸುಃ 43 ವರ್ಷ, ವಾಸಃ ನಂಃ 292/22/2,
ಮತ್ತಿಕೆರೆ ಮುಖ್ಯ ರಸ್ತೆ, 9 ನೇ ಮುಖ್ಯ ರಸ್ತೆ,
3 ನೇ ಕ್ರಾಸ್, ಯಶವಂತಪುರ,
ಬೆಂಗಳೂರು.

<u>**ಆರೋಪಣೆಯ ಸಾರಾಂಶ**</u>

ನಾನು ಶ್ರೀ. ಸಚಿನ್ ಡಿ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ., ಶೃಂಗೇರಿ, ಆರೋಪಿತರಾದ ನಿಮ್ಮ ಮೇಲೆ ಮಾಡುವ ಆಪಾದನೆ ಏನೆಂದರೆ,

ಆರೋಪಿಯಾದ ನೀವು ಫಿರ್ಯಾದಿಗೆ ಬಹಳ ವರ್ಷಗಳಿಂದ ಪರಿಚಿತರಿದ್ದು, 2013 ರಲ್ಲಿ ನೀವು ಮತ್ತು ನಿಮ್ಮ ಗಂಡ ರೂ. 20,00,000/- ಗಳ ಸಾಲವನ್ನು ಒಂದು ವರ್ಷದ ಒಳಗಾಗಿ ಶೇಕಡ 10 ರಷ್ಟು ಬಡ್ಡಿಯೊಂದಿಗೆ ಮರುಪಾವತಿ ಮಾಡುವುದಾಗಿ ಕೇಳಿದ್ದು, ಆ ಪ್ರಕಾರ ಫಿರ್ಯಾದಿ ದಿನಾಂಕಃ 06.08.2013 ಮತ್ತು 23.08.2013 ರಂದು ಕ್ರಮವಾಗಿ ರೂ ಹತ್ತು ಲಕ್ಷ ಮತ್ತು ನಾಲ್ಕು ಲಕ್ಷ ಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಶೃಂಗೇರಿ ಶಾಖೆಯಿಂದ ನಿಮ್ಮ ಖಾತೆಗೆ ಆರ್ ಟಿ ಜಿ ಎಸ್ ಮುಖಾಂತರ ಪಾವತಿ ಮಾಡಿದ್ದು, ನಂತರ ಒಂದು ಲಕ್ಷ ರೂಪಾಯಿಗಳನ್ನು ನಗದು ಮೂಲಕ ಹಾಗೂ ಇನ್ನು ಐದು ಲಕ್ಷ ರೂಪಾಯಿಗಳನ್ನು ತಮ್ಮ ಹೆಂಡತಿ ಪದ್ಮಿನಿರವರ ಖಾತೆ ಮೂಲಕ ನಿಮಗೆ ಸಾಲವಾಗಿ ನೀಡಿದ್ದು, ಸದರಿ ಸಾಲದ ಮರುಪಾವತಿಗಾಗಿ ಫಿರ್ಯಾದಿಗೆ ನಿಮ್ಮ ಖಾತೆ ಹೊಂದಿರುವ ಐ.ಸಿ.ಐ.ಸಿ.ಐ ಬ್ಯಾಂಕ್, ನ್ಯೂ ಬೆಲ್ ರೋಡ್ ಶಾಖೆಯ ಚೆಕ್ ಸಂಖ್ಯೆಃ 173176, ದಿನಾಂಕಃ18.08.2018, ರೂ.1,00,000/- ಎಂದು ನಮೂದಿಸಿ ನೀಡಿದ್ದು, ಸದರಿ ಚೆಕ್ಕನ್ನು ಫಿರ್ಯಾದಿಯು ಸಿಂಡಿಕೇಟ್ ಬ್ಯಾಂಕ್, ಶೃಂಗೇರಿ ಶಾಖೆಯಲ್ಲಿ ಜಮೆಗಾಗಿ ಸಲ್ಲಿಸಿದಾಗ ನಿಮ್ಮ ಖಾತೆಯಲ್ಲಿ ಸಾಕಷ್ಟು ಹಣವಿಲ್ಲ (Funds Insufficient) ಎಂದು ಹಿಂಬರಹ ನೀಡಿದ್ದು ಇರುತ್ತದೆ. ಕಾರಣ ಪಿರ್ಯಾದಿಯು ದಿನಾಂಕಃ26.09.2018 ರಂದು ನೋಟೀಸ್ ಮೂಲಕ ಆರೋಪಿಯಾದ ನಿಮಗೆ ಸದರಿ ವಿಚಾರವನ್ನು ತಿಳಿಸಿದ್ದರೂ ಕೂಡ ನೀವು ಸಾಲದ ಹಣವನ್ನು ವಾಪಸ್ಸು ಮಾಡಿರುವುದಿಲ್ಲ. ಈ ರೀತ್ಯ ನೀವು ನೆಗೋಷಿಯೆಬಲ್ ಇನ್ಸ್ ಟ್ರುಮೆಂಟ್ ಆ್ಯಕ್ಟ್ ಕಲಂ 138 ರ ಅನ್ವಯ ಶಿಕ್ಷಾರ್ಹ ಅಪರಾಧ ಮಾಡಿರುವಿರಿ ಎಂದು ನಿಮ್ಮ ಮೇಲೆ ಆಪಾದಿಸಲಾಗಿದೆ?

ಪ್ರಶ್ನೆಃ1) ಈಗ ಓದಿ ಹೇಳಿದ ಆಪಾದನೆಯನ್ನು ಕೇಳಿದೆಯಾ? ಅದು ನಿಮಗೆ ಅರ್ಥವಾಯಿತೇ?

ಆರೋಪಿಯ ಉತ್ತರಃ

ಪ್ರಶ್ನೆಃ2) ನೀವು ಆಪಾದನೆಯನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗಬೇಕೋ?

ಆರೋಪಿಯ ಉತ್ತರಃ

(ಆರೋಪಿತನಿಗೆ ದಿನಾಂಕಃ27.11.2021 ರಂದು ಆರೋಪಣೆಯ ಸಾರಾಂಶವನ್ನು ಅವರಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿಕೆಯನ್ನು ನನ್ನ ಸಮಕ್ಷಮದಲ್ಲಿ ಬರೆದುಕೊಳ್ಳಲಾಯಿತು. ಅದು ಸತ್ಯವಾಗಿಯೂ ಮತ್ತು ಸರಿಯಾಗಿಯೂ ಇರುತ್ತದೆ ಅಂತಾ ಪ್ರಮಾಣೀಕರಿಸುತ್ತೇನೆ)

ದಿನಾಂಕಃ 27.11.2021.

ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್. ಸಿ.
ಶೃಂಗೇರಿ.

ಆರೋಪಿಯ ಸಹಿಃ

Complainant absent and his counsels is present.

Accused is present. Substance of the accusation for the offence punishable under section 138 NI Act is framed and read over to the accused in Kannada language known to her. She denied the same and claimed to be tried.

For complainant evidence by:09.12.2021.

Civil Judge & JMFC.,Sringeri.